ಕರ್ನಾಟಕದಲ್ಲಿ ನೀರಾವರಿ

೧೪೯೯ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯದಲ್ಲಿ ಶೇಕಡಾವಾರು ನೀರಾವರಿಗೊಳಪಟ್ಟ ಪ್ರದೇಶ ಮತ್ತು ಇದು ರಾಷ್ಟ್ರ ಮಟ್ಟದ ಅಂಕಿಅಂಶಗಳೊಡನೆ ಹೇಗೆ ಹೋಲುತ್ತದೆ ?

ಆ) ಕರ್ನಾಟಕದಲ್ಲಿ ವಿವಿಧ ಮೂಲಗಳಿಂದ ನೀರಾವರಿಗೆ ಒಳಪಡುವ ಅಂತಿಮ ಸಾಮರ್ಥ್ಯ?

ಇ) ಈ ಸಾಮರ್ಥ್ಯ ಸಿದ್ಧಿಯಾಗಬೇಕಾಗುವ ಒಟ್ಟು ಆರ್ಥಿಕ ಮೌಲ್ಯವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೨-೮೩ನೇ ಸಾಲಿನಲ್ಲಿ ಕರ್ನಾಟಕದಲ್ಲಿ ನೀರಾವರಿಯಾದ ಕ್ಷೇತ್ರವು ಬಿತ್ತನೆಯಾದ ನಿವ್ವಳ ಕ್ಷೇತ್ರದ ಶೇಕಡ ೩೦ ರಷ್ಟಿತ್ತು. ರಾಷ್ಟ್ರಮಟ್ಟದಲ್ಲಿನ ಈ ಸಂಖ್ಯೆಯು ಶೇಕಡ ೨೮.೨ ರಷ್ಟಿತ್ತು.

ಆ) ಕರ್ನಾಟಕದ ಗರಿಷ್ಠ ನೀರಾವರಿ ಸಾಮರ್ಥ್ಯವು ಮೇಲ್ಮೈ ಜಲದಿಂದಾದ ೪೫ ಲಕ್ಷ ಹೆಕ್ಟೇರುಗಳು ಹಾಗೂ ಭೂಜಲದಿಂದಾದ ೧೦ ಲಕ್ಷ ಹೆಕ್ಟೇರುಗಳು ಸೇರಿದಂತೆ. ಒಟ್ಟು ೫೫ ಲಕ್ಷ ಹೆಕ್ಟೇರುಗಳು.

ಇ) ಈಗ ನಿರ್ಮಾಣಗೊಳ್ಳುತ್ತಿರುವ ಹಾಗೂ ಇನ್ನೂ ಕೈಗೊಳ್ಳಬೇಕಾಗಿರುವ ಎಲ್ಲಾ ಮೇಲ್ಮೈ ನೀರಿನ ನೀರಾವರಿ ಯೋಜನೆಗಳಿಂದ ಪೂರ್ಣ ಗೊಳ್ಳಲು ಸುಮಾರು ೫೫೦೦ ಕೋಟಿ ರೂಪಾಯಿಗಳು ಬೇಕಾಗುವುದು.

ನದಿಗಳಿಂದ ನೀರಿನ ವರ್ಗಾವಣೆ

೧೫೦೦ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು). — ಮಾನ್ಯ ಕಂದಾಯ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಹಾನದಿ ಮತ್ತು ಗೋದಾವರಿ ನದಿಗಳ ಬಳಸಲಾಗದ ನೀರನ್ನು ಕೃಷ್ಣಾ ಜಲಾನಯನ ಪ್ರದೇಶಕ್ಕೆ ವರ್ಗಾಯಿಸುವ ಪ್ರಸ್ತಾವನೆಯನ್ನು ಭಾರತ ಸರ್ಕಾರ ಮಾಡಿದೆಯೇ ?

ಆ) ಕೃಷ್ಣಾ ಜಲಾನಯನ ಪ್ರದೇಶದ ವಿವಿಧ ರಾಜ್ಯಗಳಲ್ಲಿ, ಎಂದರೆ ಆಂಧ್ರ ಮಹಾರಾಷ್ಟ್ರ ಮತ್ತು ಕರ್ನಾಟಕಗಳಿಗೆ ಒದಗಿಸಲು ಸೂಚಿಸಲಾಗಿರುವ ನೀರಿನ ಪ್ರಮಾಣ ಎಷ್ಟು ?

ಇ) ಈ ನೀರನ್ನು ಉಪಯೋಗಿಸಿಕೊಳ್ಳಲು ಕೆಲವು ಯೋಜನೆಗಳನ್ನು ತಯಾರಿಸಬೇಕೆಂದು ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನೆ, ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ಹೌದು.

ಆ) ಆಂಧ್ರ ೧೦.೫ ಎಂ.ಎ.ಎಫ್.

ಕರ್ನಾಟಕ ೪.೫ ಎಂ.ಎ.ಎಫ್.

ಮಹಾರಾಷ್ಟ್ರ ೪.೫ ಎಂ.ಎ.ಎಫ್.

ಇ) ಈ ಮೇಲಿನ ನೀರನ್ನು ಬಳಕೆ ಮಾಡಲು ಯೋಜನೆಗಳನ್ನು ತಯಾರಿಸಲು ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರವು ಸಲಹೆ ಮಾಡಿದೆ.

ಅಧ್ಯಕ್ಷರು.— ಈಗ ಮಾನ್ಯ ಜಾಲಪ್ಪನವರು ಹೇಳಿಕೆ ಕೊಡಬಹುದು.

ಶ್ರೀಮತಿ ಕೆ. ಎಸ್ ನಾಗರತ್ನಮ್ಮ.— ಅದಕ್ಕೂ ಮೊದಲು ನಾವು ಕೊಟ್ಟಿರುವ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಕೊಡಬೇಕು

ಅಧ್ಯಕ್ಷರು.— ತಾವು ಸಹ ನನ್ನ ಜಾಗದಲ್ಲಿ ೬ ವರ್ಷಗಳ ಕಾಲ ಕೆಲಸ ಮಾಡಿ ಅನುಭವ ಪಡೆದಿದ್ದೀರಿ. ಆದ್ದರಿಂದ ನಿಯಮದ ಪ್ರಕಾರ ನಾವು ಹೋಗೋಣ. ಅವರು ಹೇಳಿಕೆ ಕೊಟ್ಟಮೇಲೆ ನಿಮ್ಮ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ. ನಂತರ ಸರ್ಕಾರದವರು ಕೊಡುವ ಉತ್ತರದ ಆಧಾರದ ಮೇಲೆ ನಿಮ್ಮ ನಿಲುವಳಿ ಸೂಚನೆಗೆ ಅನುಮತಿ ಕೊಡಬೇಕೋ ಅಥವಾ ಬೇಡವೋ ಎಂಬುದನ್ನು ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಅವರು ಹೇಳಿಕೆ ಕೊಡುವುದಕ್ಕೂ ಮೊದಲು...

ಅಧ್ಯಕ್ಷರು.— ಇಲ್ಲಿ ನಿಯಮ ಏನಿದೆ ಎಂಬುದನ್ನು ನಾನು ತಮಗೆ ಓದಿ ಹೇಳುತ್ತೇನೆ.

167 1) A member who has resigned the office of Minister may, with the consent of the Speaker make a personal statement in explanation of his resignation.

2) A copy of the statement shall be forwarded to the Speaker and the Leader of the House one day in advance of the day on which it is proposed to be made.

Provided that in the absence of a written statement the points or the gist of such statement shall be conveyed to the Speaker and the Leader of the House one day in advance of the day on which it is proposed to be made.

3) Such a statement shall be made after questions and before the list of business for the days is entered upon.

4) There shall be no debate on such statement, but after it has been made, a Minister may make a statement pertinent thereto ''

ಇದರ ಪ್ರಕಾರ ನಾನು ಅವರಿಗೆ ಹೇಳಿಕೆ ಕೊಡಲು ಅನುಮತಿ ಕೊಟ್ಟಿದ್ದೇನೆ. ಅವರು ಹೇಳಿಕೆ ಕೊಟ್ಟ ಮೇಲೆ ನಿಮಗೆ ನಿಮ್ಮ ನಿಲುವಳಿ ಸೂಚನೆ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಈ ಬಗ್ಗೆ ನಿಮಗೂ ಸಹ ಸಾಕಷ್ಟು ಅನುಭವ ಇದೆ. ಆದ್ದರಿಂದ ನಾವು ಇಲ್ಲಿ ನೀತಿ ನಿಯಮಗಳ ಪ್ರಕಾರ ಹೋಗೋಣ. ಯಾವುದೇ ನಿಲುವಳಿ ಸೂಚನೆ ಬಂದರೂ ಸಹ ಅದನ್ನು ನನ್ನ ಛೇಂಬರ್ ನಲ್ಲಿಯೇ ರಿಜೆಕ್ಟ್ ಮಾಡುವುದಿಲ್ಲ. ಆ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡುತ್ತೇನೆಂದು ಹಿಂದೆ ನಾನು ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ ಇದೆ. ಏನೆಂದರೆ...

ಅಧ್ಯಕ್ಷರು.— ನಿಮ್ಮ ನಿಲುವಳಿ ಸೂಚನೆ ಸಹ ನನಗೆ ಬಂದಿದೆ. ಅದನ್ನು ಪ್ರಸ್ತಾಪ ಮಾಡಲು ತಮಗೂ ಸಹ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಮೊದಲು ತಾವು ನಮ್ಮ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ. ನಂತರ ಸರ್ಕಾರದವರು ಉತ್ತರ ಕೊಡಲಿ. ಇದಾದ ಮೇಲೆ ನೀವು ಅವರಿಗೆ ಸ್ಟೇಟ್‌ಮೆಂಟ್ ಮಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.— ನಾವು ನಿಯಮವನ್ನು ಬಿಟ್ಟು ಹೋಗುವುದು ಬೇಡ. ನಿಮ್ಮ ನಿಲುವಳಿ ಸೂಚನೆಯನ್ನು ನಾನು ರಿಜೆಕ್ಟ್ ಮಾಡಬಹುದಾಗಿತ್ತು. ಆದರೆ ಆ ರೀತಿ ಮಾಡದೆ ಇಲ್ಲಿ ಅದರ ಬಗ್ಗೆ ಪ್ರಸ್ತಾಪ ಮಾಡಲು ನಿಮಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಹಾಗೆ ಅದಕ್ಕೂ ಮೊದಲು ಅವರು ಸ್ಟೇಟ್‌ಮೆಂಟ್ ಮಾಡಲು ಈಗಾಗಲೇ ಮಾನ್ಯ ಮಂತ್ರಿಗಳನ್ನು ಕರೆದಿದ್ದೇನೆ. ಅವರು ಸ್ಟೇಟ್‌ಮೆಂಟ್

ಮಾಡಲಿ. ಪ್ರಶ್ನೋತ್ತರ ಅವಧಿ ಮುಗಿದ ನಂ ಅವರು ಹೇಳಿಕೆ ಕೊಡಲು ಅವಕಾಶ ಮಾಡಿಕೊಡ ಬೇಕೆಂದು ನಿಯಮವಿದೆ. ಆದರ ಪ್ರಕಾರ ನಾನು ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಅವರದ್ದು ಮುಗಿದ ಕೂಡಲೇ ನಿಮಗೂ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಆರ್. ವೆಂಕಟರಾವಯ್ಯ.— ಮೊದಲು ನಮಗೆ ಮಾತನಾಡಲು ಅವಕಾಶ ಮಾಡಿಕೊಡಿ. ನಂತರ ಅವರು ಸ್ಟೇಟ್‌ಮೆಂಟ್ ಮಾಡಲಿ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.— ನನ್ನದೂ ಪಾಯಿಂಟ್ ಆಫ್ ಆರ್ಡರ್ ಇದೆ. ಏನೆಂದರೆ, ಕೌಲ್ ಅಂಡ್ ಶಕ್ದರ್‌ನಲ್ಲಿ ಈ ರೀತಿ ಹೇಳಿದ್ದಾರೆ.

ಅಧ್ಯಕ್ಷರು.— ಆ ರೂಲ್ಸನ್ನು ನಾನು ನೋಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ — ಅವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ, ಅದನ್ನು ಕೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.— ಪಾಯಿಂಟ್ ಆಫ್ ಆರ್ಡರ್. ಸನ್ಮಾನ್ಯ ಸದಸ್ಯರು ಹೇಳಿಕೆ ಕೊಡುವುದಕ್ಕೆ ಅಡ್ಡಿ ಬರಬೇಕು ಎನ್ನುವುದು ನಮ್ಮ ಉದ್ದೇಶವಲ್ಲ. ಏಕೆಂದರೆ. He is entitld for that as a matter of right. ಅವರು ಕೊಡಬಹುದು. ನಾವು ಸದನದ ಸೌಜನ್ಯದ ಪ್ರಕಾರ ಅದಕ್ಕೆ ಆತಂಕ ಒಡ್ಡಬೇಕು ಎನ್ನುವ ಉದ್ದೇಶದಿಂದ ಮಾತನಾಡುತ್ತಾ ಇಲ್ಲ. ಪ್ರಶ್ನೆ ಏನೆಂದರೆ ನಮ್ಮಲ್ಲಿ ಕೆಲವು ಸಂಸದೀಯ ಪರಂಪರೆಗಳಿವೆ. ಕೌಲ್ ಅಂಡ್ ಶಕ್ದರ್‌ನಲ್ಲಿ ಪುಟ ೯೨ ರಲ್ಲಿ ಏನು ಹೇಳಿದ್ದಾರೆ, ಅದನ್ನು ತಾವು ಸ್ವಲ್ಪ ಪರಾಂಬರಿಸಬೇಕು. ಏಕೆಂದರೆ ಕೆಲವು ಸಾರಿ ಪರಂಪರೆಯನ್ನು ಕೂಡ ಮೀರಿಯಂತಕ್ಕಂಥದ್ದು ಇದೆ.

ಅಧ್ಯಕ್ಷರು.— ಈ ರೂಲ್ಸ್‌ನಲ್ಲಿ ಇಲ್ಲ ಅಂದರೆ ಪರಂಪರೆಗಳು ಸರಿ ಕ್ಲಿಯರ್ ರೂಲ್ಸ್ ಇದ್ದಾಗ ಪರಂಪರೆಗಳು ಏಕೆ ?

ಶ್ರೀ ಎಂ ವೀರಪ್ಪಮೊಯಿಲಿ.— ಈ ರೂಲ್ಸ್ ಈ ಸದನಕ್ಕೆ ಸಂಬಂಧಪಟ್ಟಿದ್ದುದು. ಅದನ್ನು ರೂಪಿಸಬೇಕಾದರೆ, ಅನೇಕ ರಾಜ್ಯಗಳ, ಪಾರ್ಲಿಮೆಂಟ್‌ನ ಎಲ್ಲಾ ಪರಂಪರೆಗಳನ್ನು ಸೇರಿಸಿ ರೂಪಿಸಿದೆ. ಆ ರೂಲ್ಸ್ ಇರಬಹುದು. ಆದರೆ ಅದಕ್ಕೆ ನಿದರ್ಶನಗಳನ್ನು ಅಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲ. ಕೌಲ್ ಅಂಡ್ ಶಕ್ದರ್ ಪುಸ್ತಕದಲ್ಲಿ ನಿದರ್ಶನಗಳನ್ನು ವಿಶ್ಲೇಷಿಸಿದ್ದಾರೆ. ಅದನ್ನು ಪಾಲಿಸಬೇಕಾದದ್ದು, ಸತ್ಪರಂಪರೆಗಳನ್ನು ಅನುಸರಿಸತಕ್ಕಂಥ ಎಲ್ಲಾ ಪ್ರಜಾಪ್ರತಿನಿಧಿಗಳ ಕರ್ತವ್ಯ ಹಾಗೂ ತಮ್ಮದೂ ಕರ್ತವ್ಯವಿದೆ. ಅದಕ್ಕೆ ಹೊಂದಿಕೊಡಂತೆ ಪೇಜ್ ೫೯೨ ರಲ್ಲಿ ಏನು ಹೇಳುತ್ತಾರೆಂದರೆ.

> "Though it is customary for a Minister who has resigned his office to make a statement in the House explaining the reasons for his resignation, he is not bound to make such a statement and the Speaker cannot compel him to do so"

The second part of it is,

> "Moreover where the grounds which led to the resignation are well known, such statement may not be necessary"

Sir "may not be" it is mandatory.

ಏನು ಸಂಪ್ರದಾಯ ಹಾಕಿಕೊಡುತ್ತಾರೆ ಅದು ಮ್ಯಾಂಡೇಟರಿ. ಅದನ್ನು ನಾವು ಇಲ್ಲಿ ಪಾಲಿಸಬೇಕಾಗುತ್ತದೆ. ಏಕೆಂದರೆ ರಿಸಿಗ್ನೇಷನ್ ಕೊಟ್ಟಂಥ ಗ್ರೌಂಡ್ಸ್ ವೆಲ್‌ನೋನ್ ಹಿಯರ್. ಎಲ್ಲಾ ಪತ್ರಿಕೆಗಳಲ್ಲಿ ಇದು ಬಂದಿದೆ. ಮಾನ್ಯ ಮಾಜಿ ಸಚಿವರು ಆ ವಿಚಾರ ಹೇಳಿದ್ದಾರೆ. ನಾನು ಸರ್ಕಾರವನ್ನು ಪೇಚಿಗೆ ಸಿಕ್ಕಿಸುವುದಕ್ಕೆ ತಯಾರಿಲ್ಲ. ರಾಜೀನಾಮೆ ಕೊಟ್ಟಿದ್ದೇನೆ ಎಂಬ ಹೇಳಿಕೆ ಪತ್ರಿಕೆಗಳಲ್ಲಿ ಬಂದಿದೆ. ಆದುದರಿಂದ ಈ ರೀತಿ ಗ್ರೌಂಡ್ಸ್ ಸಾರ್ವಜನಿಕವಾಗಿ ಪ್ರಕಟವಾಗಿರುವಾಗ ಸದನದ ಪರಂಪರೆಯಂತೆ ಅಂತಹ ಹೇಳಿಕೆಗಳನ್ನು ನೀಡಬೇಕಾದ್ದಿಲ್ಲ, ಪಾರ್ಲಿಮೆಂಟರಿ ಪ್ರೊಸೀಜರನ್ನು ನಾವು ಅನುಸರಿಸು

ವುದರಿಂದ ಈ ನಿಬಂಧನೆ ಪ್ರಕಾರ ಹೇಳಿಕೆ ಮಾಡಬಾರದು ಎಂದು ಇಂವಾಗ ಹೇಳಿಕೆಯನ್ನು ಮಾಡ ತಕ್ಕಂಥಾದ್ದು ಸೂಕ್ತವಲ್ಲ, ಪ್ರಾಸಂಗಿಕವಾಗಿಯೂ ಅಲ್ಲ ಎಂಬುದನ್ನು ತಮ್ಮ ಗಮನಕ್ಕೆ ನಾನು ತರಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ತಾವು ಹೇಳಿಕೆ ಮಾಡುವುದಕ್ಕೆ ಅವರಿಗೆ ಅನುಮತಿ ಕೊಟ್ಟಿದ್ದೀರಿ. ಮಾನ್ಯ ಸದಸ್ಯರೂ ಕೂಡ ಸೌಜನ್ಯವಾಗಿ ಪರಂಪರೆಗೆ ತಲೆಬಾಗಿ ಹೇಳಿಕೆ ಕೊಡುವುದನ್ನು ಮಂದು ವರಿಸುವುದು ಒಳ್ಳೆಯದು ಇವತ್ತು ಅಡ್ಜರ್ನ್‌ಮೆಂಟ್ ಮೋಷನ್ ಕೂಡ ಇದೆ. ಅವರು ರಾಜೀನಾಮೆ ಕೊಡುವುದಕ್ಕೆ ಗ್ರೌಂಡ್ಸ್ ಏಪಯು ಸರ್ವವಿಧಿತವಾಗಿದೆ. ಹಾಗಿದ್ದ ಮೇಲೆ ಹೇಳಿಕೆ ಕೊಡತಕ್ಕಂಥ ಪ್ರಶ್ನೆ ಎಲ್ಲಿದೆ ? ಆದುದರಿಂದ ದಯಮಾಡಿ ತಾವು ಅನುಮತಿ ಕೊಟ್ಟಿದ್ದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು. ಸದನದ ಈ ಒಂದು ಪರಂಪರೆಗೆ ಅನುಗುಣವಾಗಿ ಸೌಜನ್ಯತೆಗೆ ಒಳಗಾಗಿ ಹೇಳಿಕೆ ಯನ್ನು ಕೊಡಬಾರದು ಎಂದು ನಾನು ಮಾನ್ಯ ಸದಸ್ಯರನ್ನು ತಮ್ಮ ಮೂಲಕ ಒತ್ತಾಯಪಡಿಸುತ್ತಾ ಇದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಸತ್ಸಂಪ್ರದಾಯ, ಪರಂಪರೆಯನ್ನು ಕಾಯ್ದುಕೊಳ್ಳುವುದಕ್ಕೆ ನಾವು ಹಿಂದೆ ಬೀಳುವುದಿಲ್ಲ. ಮಾನ್ಯ ಸದಸ್ಯರಾದ ಪೊಯ್ಲಿಯವರು ಸರ್ವವಿಧಿತವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ, ನಮಗೆ ಗೊತ್ತಿಲ್ಲ. ಮಾನ್ಯ ಜಾಲಪ್ಪ ನವರು ಇದರ ಬಗ್ಗೆ ವಿವರಗಳನ್ನು ಹೇಳಿಲ್ಲ. ಮಾನ್ಯ ಸಭಾಧ್ಯಕ್ಷರಿಗೆ ತಿಳಿಸಿ ಸದನದಲ್ಲಿ ವಿಚಾರಗಳನ್ನು ಹೇಳುತ್ತೇನೆ ಎಂದು ಹೇಳಿದ್ದಾರೆ, ಅದು ಪತ್ರಿಕೆಗಳಲ್ಲಿ ಬಂದಿದೆ. ಅವರು ಎಚ್ಚರಿಕೆಯಿಂದ ಹೇಳಿಕೆ ಕೊಟ್ಟಿದ್ದಾರೆ. ನಾನು ಏನೇ ಹೇಳಬೇಕಾದರೂ ಸದನದಲ್ಲಿ ಹೇಳುತ್ತೇನೆ ಎಂದು ಹೇಳಿದ್ದಾರೆ,

ಅನೇಕ ಸಲ ಮಂತ್ರಿಗಳು ರಾಜೀನಾಮೆ ಕೊಟ್ಟಾಗ, ಪತ್ರಿಕೆಗಳಲ್ಲಿ ಪ್ರಕಟಣೆಗಳೂ ಬಂದಿವೆ. ಪಾರ್ಲಿಮೆಂಟಿನಲ್ಲಿ ಇರಬಹುದು, ಇಲ್ಲಿ ಇರಬಹುದು. ಹೇಳಿಕೆ ಕೊಡುವ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ. ತಮ್ಮ ಅಪ್ಪಣೆಯನ್ನು ಕೇಳಿದಾಗ, ಅದನ್ನು ನಿರಾಕರಿಸತಕ್ಕಂಥ ಹಕ್ಕು ನಿಮಗೂ ಇಲ್ಲ, ಈ ಸದನಕ್ಕೂ ಇಲ್ಲ. Minister who has resigned has a right. ಈ ಮೂಲಭೂತವಾದ ಹಕ್ಕನ್ನು ಮೊಟಕುಗೊಳಿಸತಕ್ಕ ಪ್ರಯತ್ನ ಇಲ್ಲಿ ಆಗಬಾರದು. ಅವರು ಹೇಳಿಕೆ ಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಾವು ಓದಿದ ರೂಲ್ಸನ್ನು ನಾನು ಕೂಡ ಓದಿದ್ದೇನೆ. ಮಾನ್ಯ ಮಂತ್ರಿಗಳು ಹೇಳಿಕೆ ಕೊಡುವ ಬಗ್ಗೆ ಅವಕಾಶ ಇದೆಯೆಂದು ಹೇಳಿದ್ದೀರಿ. ಪ್ರಶ್ನೋತ್ತರ ಕಾಲ ಮುಗಿದ ತಕ್ಷಣ ಹೇಳಿಕೆ ಮಾಡಬಹುದು, ಆದರೆ ನಿಲುವಳಿ ಸೂಚನೆ ಇರುವಾಗ ಹೇಳಿಕೆಯನ್ನು ಮಾಡಬಹುದೆ ? ನಿಲುವಳಿ ಸೂಚನೆ ಇದ್ದು ಹೇಳಿಕೆ ಕೊಟ್ಟರೆ ನಿಲುವಳಿ ಸೂಚನೆ ಏತಕ್ಕೆ ಬೇಕು ?

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ಮಾನ್ಯ ಬೊಮ್ಮಾಯಿಯವರು, ಹೇಳಿದ ಮಾದಕ್ಕೆ ಪೂರಕವಾಗಿ ಕೆಲವು ಶಬ್ದಗಳನ್ನು ಹೇಳುತ್ತೇನೆ. Where the grounds which led to the resignation are well-known then such a statement may not be necessary. Who claims that the grounds which led to Mr. Jalappa's resignation are well known ? He is entitled to make a statement. He has sought your permission and you have been good enough to allow him to make a statement. It is in the fitness of things that a Minister who has resigned must be given an opportunity to explain the reasons for his resignation, whatever it may be. An advance copy of the statement has been forwarded to you and you have gone through it and you have found it reasonable that the Minister may be permitted to make a statement before the House, which led to his resignation. Therefore, in all propriety he should be given an opportunity this is my submission. There is nothing which comes in the way of rules. It may not be necessary or it may be necessary and you are the final arbiter of giving permission or not giving permission. You have exercised that power. My submission is that

the ruling given by you must be adhered to and the hon'ble member Mr. Jalappa should be permitted to make his statement.

SRI R. VENKATARAMAIAH –I have also moved an application under Section 68. I have also asked your permission. In the meanwhile Jalappa should not be permitted to make a statement. ಆದಕ್ಕೋಸ್ಕರ ತಾವು ಮೊದಲು ನಾವು ಹೇಳುವುದನ್ನು ಕೇಳಿ ಮಾನ್ಯ ಶ್ರೀ ಜಾಲಪ್ಪನವರು ಈಗಲೇ ಹೇಳಿಕೆ ಕೊಡುವುದು ನ್ಯಾಯವಾದುದಲ್ಲ. ಮಾನ್ಯ ಸದಸ್ಯರುಗಳ ಅಭಿಪ್ರಾಯವನ್ನು ಮೊದಲು ಕೇಳಿ ನಂತರ ಹೇಳಿಕೆ ಕೊಡುವುದು ಸೂಕ್ತವಾಗಿರುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಶ್ರೀ ಜಾಲಪ್ಪನವರು, ಮಂತ್ರಿ ಸ್ಥಾನಕೆ ೨ ಕೊಟ್ಟವೇಲೆ, ೯ನೇ ತಾರೀಖು ವಿಧಾನ ಸಭೆಯಲ್ಲಿ ಹೇಳಿಕೆ ಕೊಡುವುದಕ್ಕೆ ಅಪ್ಪಣೆ ಕೊಡಬೇಕೆಂದು ಪತ್ರ ಬರೆದಿದ್ದರು. ಪತ್ರದೊಂದಿಗೆ ಹೇಳಿಕೆ ಪ್ರತಿಯನ್ನು ಕೂಡ ಲಗತ್ತಿಸಿ ಕಳುಹಿಸಿದ್ದರು. I have permitted the hon. Member to make a statement today. ಇವೊತ್ತಿನ ದಿವಸ ತಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ. ನಿನ್ನೆಯ ದಿವಸ ಬೆಳಿಗ್ಗೆ ನನ್ನ ಛೇಂಬರಿನಲ್ಲಿಯೇ ಅದನ್ನು ವಜಾ ಮಾಡಬಹುದಿತ್ತು, ಮಾಡಲಿಲ್ಲ. ಯಾವ ರೀತಿಯಾಗಿಯೂ ಮಾನ್ಯ ಸದಸ್ಯರ ಹಕ್ಕನ್ನು ಮೊಟಕು ಮಾಡಬಾರದು ಎನ್ನುವ ಉದ್ದೇಶದಿಂದ ಅವರಿಗೆ ಮೊದಲೇ ಪರ್ಮಿಷನ್ ಕೊಟ್ಟಿದ್ದೇನೆ. ಅವರಿಗೆ ಹೇಳಿಕೆಯನ್ನು ಓದಲು ಈಗಾಗಲೇ ಪರ್ಮಿಷನ್ ಕೊಟ್ಟಿದ್ದೇನೆ. ಅವರು ಈಗಾಗಲೇ ಎರಡು ಪ್ಯಾರಾ ಓದಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ವೀರಪ್ಪಮೊಯಿಲಿ ಅವರು ಪಾಯಿಂಟ್ ಆಫ್ ಆರ್ಡರ್ ಅನ್ನು ಎತ್ತಿದ್ದಾರೆ. ಅದರ ಬಗ್ಗೆ ಈಗಾಗಲೇ ನಾನು ರೂಲಿಂಗ್ ಕೊಟ್ಟಿದ್ದೇನೆ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಅನ್ನು ತಳ್ಳಿ ಹಾಕಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ನಾರ್ಮಲ್ ಕೋರ್ಸ್‌ನಲ್ಲಿ.....

(Interruption)

SRI M. MALLIKARJUNA KHARGE.—That rule is applicable in the normal course. Immediately after the question hour Minister can make a statement.

ಅಧ್ಯಕ್ಷರು.—ನಾನು ಈಗಾಗಲೇ ಅದರ ಬಗ್ಗೆ ರೂಲಿಂಗ್ ಕೊಟ್ಟಿದ್ದೇನೆ. ನಾನು ಶ್ರೀ ಆರ್. ಎಲ್. ಜಾಲಪ್ಪನವರಿಗೆ ಅವರ ಹೇಳಿಕೆಯನ್ನು ಓದಲು ಅವಕಾಶ ಕೊಟ್ಟಿದ್ದೇನೆ. ಆದುದರಿಂದ ಅವರು ತಮ್ಮ ಹೇಳಿಕೆಯನ್ನು ಮುಂದುವರೆಸುತ್ತಿದ್ದಾರೆ. ತಾವು ಕೊಟ್ಟ ಸೂಚನೆಯನ್ನು ನಾನು ನಿರಾಕರಣೆ ಮಾಡಬಹುದಾಗಿತ್ತು ಮಾಡಲಿಲ್ಲ. ತಾವು ಮಂತ್ರಿಗಳಾಗಿ ಕೆಲಸ ಮಾಡಿದವರು. ಅವರು ಕೊಡುವ ಹೇಳಿಕೆಯನ್ನು ಕೇಳುವ ಸೌಜನ್ಯವೂ ಇಲ್ಲ ಎಂದರೆ ಹೇಗೆ ?

(ಗೊಂದಲ)

ಅಧ್ಯಕ್ಷರು.—ಮಾನ್ಯ ಜಾಲಪ್ಪನವರು ಅಧ್ಯಕ್ಷರ ಪರ್ಮಿಷನ್ ಕೇಳಿರುವುದು ಜಗಜ್ಜಾಹಿರವಾಗಿದೆ. ಅವರು ಅಸೆಂಬ್ಲಿಯಲ್ಲಿ ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು. ಅವರು ಹೇಳಿಕೆ ಮಾಡುವುದಕ್ಕೆ ಪರವಾನಗಿ ತೆಗೆದುಕೊಂಡೇ ಸ್ಟೇಟ್‌ಮೆಂಟ್ ಮಾಡುತ್ತಿದ್ದಾರೆ, ಅವರು ತಮ್ಮ ಹೇಳಿಕೆಯನ್ನು ಮುಂದುವರೆಸಬಹುದು.